SWF

17/(8)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹಾವಣಗಿ ಬೀಜೋತ್ಪಾದನಾ ಕೇಂದ್ರ, ತಾಲೂಕಿನ ಹಾನಗಲ್ ಕ್ಷೇತವನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡಕ್ಕೆ ಹಸ್ತಾಂತರಿಸುವ ಬಗ್ಗೆ.

ಸರ್ಕಾರಿ ಆದೇಶ ಸಂಖ್ಯೆ:ಕೃಇ/167/ಕೃಇಕ/2012, ಬೆಂಗಳೂರು, ದಿನಾಂಕ 17ನೇ ಮೇ 2012.

ಓದಲಾಗಿದೆ:- 1)ಕುಲ ಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರ ಪತ್ರ ಸಂಖ್ಯೆ:ಕುಸ/ಡಿಪ್ಲಮಾ/2011-12, 27300, ದಿನಾಂಕ 12.10.2011

2)ಕೃಷಿ ಆಯುಕ್ತರ ಪತ್ರ ಸಂಖ್ಯೆ: ಉಕೃನಿ/(ಸ್ಪೇ.ಫಾ)/ ತಾಂ:2/ ಹಾ.ಬಿ.ಕೇಂ.34/2009-10, ದಿನಾಂಕ 08.02.2012.

ಪ್ರಸ್ತಾವನೆ:

ಧಾರವಾಡ ಕೃಷಿ ವಿಶ್ವವಿದ್ಯಾನಿಲಯ 2011-12ನೇ ಸಾಲಿನಿಂದ ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರು ಗ್ರಾಮದಲ್ಲಿ ಎರಡು ವರ್ಷದ ಕೃಷಿ ಡಿಪ್ಲಮಾ ಕೋರ್ಸನ್ನು ಸರ್ಕಾರದ ಅನುಮೋದನೆಯೊಂದಿಗೆ ದಿನಾಂಕ 17.10.2011ರಿಂದ ಪ್ರಾರಂಭಿಸಿದ್ದು, ಇದಕ್ಕೆ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ಆದರೆ, ವಿದ್ಯಾರ್ಥಿಗಳಿಗೆ ವಸತ, ಬೋಧನೆ ಹಾಗೂ ಪ್ರಾತ್ಯಕ್ಷಿಕೆ ಸೌಲಭ್ಯಗಳಿಗಾಗಿ ಹಾವಣಗಿ ಬೀಜೋತ್ಪಾದನಾ ಕೇಂದ್ರವನ್ನು ಧಾರವಾಡ ಕೃಷಿ ವಿಶ್ವವಿದ್ಯಾನಿಲಕ್ಕೆ ಆದಷ್ಟು ಬೇಗನೇ ವರ್ಗಾಯಿಸಿಕೊಂಡು, ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಮೇಲೆ(2) ರಲ್ಲಿ ಓದಲಾದ ಪತ್ರದಲ್ಲಿ ಈ ಪ್ರಸ್ತಾವನೆಯ ಮೇಲೆ ಕೃಷಿ ಆಯುಕ್ತರು ಅಭಿಪ್ರಾಯ ನೀಡದ್ದು, ಹಾವಣಗಿ ಬೀಜೋತ್ಪಾದನಾ ಕೇಂದ್ರದ ಒಟ್ಟು 25.30 ಎಕರೆ ಪ್ರದೇಶವಿದ್ದು, 22.50 ಎಕರೆ ನೀರಾವರಿ ಜಮೀನು ಸಾಗುವಳಿಗೆ ಯೋಗ್ಯವಾಗಿರುತ್ತದೆ. ಉಳಿದ 3.20 ಎಕರೆ ಜಮೀನು ರಸ್ತೆ ಕಟ್ಟಡ ಗಳಿಂದ ಕೂಡಿದೆ. ಸದರಿ ಬೀಜೋತ್ಪಾದನಾ ಕೇಂದ್ರದಲ್ಲಿ ಪ್ರತಿ ವರ್ಷ ಭತ್ತದ ಬೀಜೋತ್ಪಾದನೆಯನ್ನು ಕೈಗೊಳ್ಳಲಾಗುತ್ತಿದ್ದು, ಜಮೀನನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ಕೃಷಿ ಡಿಪ್ಲಮಾ

ಕೋರ್ಸನ್ನು ಪ್ರಾರಂಭಿಸಲು ಹಸ್ತಾಂತರಿಸುವಲ್ಲಿ ಸರ್ಕಾರದ ಮಟ್ಟದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲು ಕೋರಿರುತ್ತಾರೆ.

ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರ ಅವಶ್ಯಕತೆಯನ್ನು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಆದೇಶ

ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರು ಗ್ರಾಮದಲ್ಲಿ ಪ್ರಾರಂಭಿಸಲಾಗಿರುವ ಎರಡು ವರ್ಷಗಳ ಡಿಪ್ಲಮಾ ಕೋರ್ಸ್‌ಗಾಗಿ ಹಾವಣಗಿಯ ಬೀಜೋತ್ಪಾದನಾ ಕೇಂದ್ರದ 25 ಎಕರೆ 20 ಗುಂಟೆ ಜಮೀನನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಹಸ್ತಾಂತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಸದರಿ ಜಮೀನನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ಹಸ್ತಾಂತರಿಸುವ ಮುನ್ನ ಷರತ್ತುಗಳನ್ನು ವಿಧಿಸಿ, ಕೃಷಿ ಆಯುಕ್ತರು ಪ್ರತ್ಯೇಕ ಆದೇಶ ಹೊರಡಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಶೀರಾಮ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ಪರಿಶೋಧನೆ), ಕರ್ನಾಟಕ ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ.
3. ಆಯುಕ್ತರು, ಕೃಷಿ ಇಲಾಖೆ ಬೆಂಗಳೂರು.
4. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ
5. ಸರ್ಕಾರದ ಅಪರ ಕಾರ್ಯದರ್ಶಿ ಕೃಷಿ ಇಲಾಖೆ ಇವರ ಆಪ್ತ ಸಹಾಯಕರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.